ದಿನಾಂಕಃ 11-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಬಿ ಆರ್ ಎಸ್ ವಕೀಲರಿಂದ

ಈಗ ತೋರಿಸುತ್ತಿರುವ ದಾಖಲೆಯಲ್ಲಿ ಇರುವ ಪೋಟೋ ಯಾರದ್ದು ಎಂದರೆ ನನ್ನ ತಂದೆ ತಾಯಿದು ಅಂತ ಹೇಳಿ ಹೊಂದಾಣಿಕೆ ಮಾಡಿರುತ್ತಾರೆ. ದಿಃ12-04-12 ರ ಕ್ರಯ ಪತ್ರದಲ್ಲಿ ಇರುವ ಸಹಿ ನಿಮ್ಮ ತಂದೆ ಸಹಿ ಎಂದರೆ ನನ್ನ ತಂದೆ ಸಹಿ ತರಹ ಕಾಣಿಸುತ್ತಿದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ದಾಖಲೆಯಲ್ಲಿ ಏನು ಬರೆದಿರುತ್ತದೆ ಅಂತ ಗೊತ್ತಿರುವುದಿಲ್ಲ. ಶಿಡ್ಲಘಟ್ಟ ನ್ಯಾಯಾಲಯದಲ್ಲಿ ನಿಮ್ಮ ಕುಟುಂಬದವರು ಯಾರು ದಾವೆ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಆ ದಾವೆಯಲ್ಲಿ ನಿಮ್ಮ ವಕೀಲರು ಯಾರು ಎಂದರೆ ಎಸ್ ಕೆ ನಾಗರಾಜ್. ಎಸ್ ಕೆ ನಾಗರಾಜ್ ರವರು ಅಲ್ಲಿ ಏನು ದಾವೆ ನೆಡಯುತ್ತಿದೆ ಅಂತ ತಿಳಿಸಿರುತ್ತಾರಾ ಎಂದರೆ ಹೆಣ್ಣು ಮಕ್ಕಳು ಜಮೀನಿನ ಮೇಲೆ ದಾವೆ ಸಲ್ಲಿಸಿರುತ್ತಾರೆ ಅಂತ ತಿಳಿಸಿರುತ್ತಾರೆ. ಈ ಆಸ್ತಿಯ ಬಗ್ಗೆ ಆ ದಾವೆಯಲ್ಲಿ ಇರುವುದಿಲ್ಲ ಅಂತ ಹೇಳಿರುತ್ತಾರೆ. ಶಿಡ್ಲಘಟ್ಟದಲ್ಲಿ ಇರುವ ಆಸ್ತಿಗಳು ನಮ್ಮದಲ್ಲ. ನಾನು ಸ್ವಯಾರ್ಜಿತವಾಗಿ ಸರ್ವೆ ನಂ.83/1 ಅನ್ನು ಖರೀದಿ ಮಾಡಿರುತ್ತೇನೆ. ಕಲ್ಪನಾ ರವರು ಆ ಆಸ್ತಿಯಲ್ಲಿ ಭಾಗ ಬರಬೇಕು ಅಂತ ಹೇಳಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ದಾವೆಯಲ್ಲಿ 83/1 ರ ಆಸ್ತಿ ಸ್ವಂತ ಆಸ್ತಿ ಅಂತ ಹೇಳಿರುವುದಿಲ್ಲ ಎಂದರೆ ನಾನು ನ್ಯಾಯಾಲಯಕ್ಕೆ ಇನ್ನು ಹೋಗಿರುವುದಿಲ್ಲ.

ದಾವಾ ಆಸ್ತಿ ನಿಮ್ಮ ತಂದೆಗೆ ಹೇಗೆ ಬಂತು ಎಂದರೆ ನಾನು, ನನ್ನ ತಂದೆ ತಾಯಿ ಎಲ್ಲಾ ಒಟ್ಟಾಗಿ ಗಳಿಸಿದ ಆಸ್ತಿ. ಆ ಪತ್ರ ನನ್ನ ತಂದೆ 1998 ರಲ್ಲಿ ಹೆಸರಿಗೆ ಇದ್ದು ನಂತರ ನನ್ನ ತಾಯಿ ಹೆಸರಿಗೆ ಬಂದಿರುತ್ತದೆ. ಆ ಕಾಲಕ್ಕೆ ನನಗೆ 150 ರೂ ಸಂಪಾದನೆ ಮಾಡುತ್ತಿದೆ. ನಾನು 1985 ರಲ್ಲಿ ಹುಟ್ಟಿರುತ್ತೇನೆ. ಆ ಆಸ್ತಿಯನ್ನು ಖರೀದಿ ಮಾಡಿದಾಗ ನಿಮಗೆ 2 ರಿಂದ 3 ವರ್ಷ ವಯಸ್ಸು ಎಂದರೆ ನನಗೆ 14 ವರ್ಷ. ಆಗ ನೀವು ಯಾವುದೇ ಸಂಪಾದನೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವಾಗ ನಾನು ಈ ರೀತಿ ಕೆಲಸ ಮಾಡುತ್ತಿದ್ದೆ ಅಂತ ತಿಳಿಸಿರುತ್ತೇನೆ. ದಾವಾ ಆಸ್ತಿ ನಿಮ್ಮ ಒಟ್ಟು

ಸ್ವಾಧೀನದಲ್ಲಿ ಇಲ್ಲ ಎಂದರೆ ಈಗಲೂ ಸಹ ನಮ್ಮ ಸ್ವಾಧೀನದಲ್ಲಿ ಇದೆ. ಕ್ರಯ ಪತ್ರದ ದಿನಾಂಕ ಗೊತ್ತಿಲ್ಲ. ಆ ಕ್ರಯ ಪತ್ರ ಎಷ್ಟಕ್ಕೆ ಆಗಿದೆ ಅಂತ ಗೊತ್ತಿಲ್ಲ ಖಾತೆ ಪಹಣಿ ಯಾರ ಹೆಸರಿನಲ್ಲಿ ಇದೆ ಎಂದರೆ ಮೊದಲು ಸುಬ್ಬರಾಯಪ್ಪನ ಹೆಸರಿನಲ್ಲಿ ಬರುತ್ತಿದ್ದು ಅವರ ಮೇಲೆದಾವೆ ಹಾಕಿದ ನಂತರ ಜಯಲಕ್ಷ್ಮಮ್ಮ ನವರ ಹೆಸರಿಗೆ ಬಂದಿರುತ್ತದೆ. ದಿಃ12-04-12 ರಲ್ಲಿ ನಿಮ್ಮ ತಂದೆಯವರ ಸ್ವಯಾರ್ಜಿತ ಆಸ್ತಿಯನ್ನು 7 ನೇ ಪ್ರತಿವಾದಿ ಸುಬ್ಬರಾಯಪ್ಪನವರಿಗೆ ನಿಮ್ಮ ತಂದೆ ತಾಯಿ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು ಆ ಆಸ್ತಿಯನ್ನು ಮನೆಯ ಖರ್ಚಿಗಾಗಿ ಹಾಗೂ ಮಕ್ಕಳನ್ನು ಓದಿಸುವುದಾಕ್ಕಗಿ ತಮ್ಮ ಸರ್ಯಾರ್ಜಿತ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು ಅಂದಿನಿಂದ ಸುಬ್ಬರಾಯಪ್ಪ ಮತ್ತು ಅವರ ಹೆಂಡತಿ ಮಕ್ಕಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸುಳ್ಳು ಕಲ್ಪನಾ ನನ್ನ ಅಕ್ಕ. ಕಲ್ಪನಾ ರವರ ಗಂಡ ಹೆಸರು ಗೋಪಾಲಕೃಷ್ಣ. ನಿಡಿ-1 ದಾಖಲೆಯಲ್ಲಿ ಇರುವ ಸಹಿ ಓದಲು ಬರುವುದಿಲ್ಲ ನಾನು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇನೆ. ಕನ್ನಡ ಓದುತ್ತೇನೆ. ನಿಡಿ-1 ರಲ್ಲಿ ಇರುವ ಸಾಕ್ಷಿದಾರರ ಸಹಿ ಗೋಪಾಲಕೃಷ್ಣ. ನಿಡಿ-1 ಕ್ಕೆ ನಿಮ್ಮ ಅಕ್ಕ ಕಲ್ಪನಾ ರವರು ಸಹಿ ಮಾಡಿರುತ್ತಾರೆ ಎಂದರೆ ಅವರು ಯಾರೂ ಅಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಗೋಪಾಲಕೃಷ್ಣ ರವರ ಸಹಿಯನ್ನು ನಿಡಿ-1 (ಎ) ಎಂದು ಗುರುತಿಸಲಾಯಿತು. ಸುಬ್ಬರಾಯಪ್ಪನವರ ಹೆಂಡತಿ ಹೆಸರು ಜಯಲಕ್ಷ್ಮಮ್ಮ. ಸುಬ್ಬರಾಯಪ್ಪನವರ ಹೆಂಡತಿ ಹೆಸರು ಜಯಲಕ್ಷ್ಮಮ್ಮ ಅಲ್ಲ ವೆಂಕಟಲಕ್ಷ್ಮಮ್ಮ ಎಂದರೆ ಯಾರೋ ಹೇಳಿರುತ್ತಾರೆ. ವೆಂಕಟಲಕ್ಷ್ಮಮ್ಮ ಇರುವುದಿಲ್ಲ. ಅವರಿಗೆ 4 ಜನ ಮಕ್ಕಳು. ನೀವು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಶಿಡ್ಲಘಟ್ಟ ನ್ಯಾಯಾಲಯದಲ್ಲಿ ನಡೆಯುತ್ತಿರುವ ದಾವೆ ಸಂಖ್ಯೆ ಅಸಲು ದಾವೆ ಸಂಖ್ಯೆ 323/2017 ಎಂದರೆ ಸರಿ. ಬ್ಯಾಂಕ್ ನಲ್ಲಿ ಹಣ ಕೊಡಿಸುತ್ತೇನೆ ಅಂತ ಹೇಳಿ ಪತ್ರ ಮಾಡಿಸಿಕೊಂಡಿರುತ್ತಾರೆ ಎನ್ನುವುದು ಸುಳ್ಳು ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.